# ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

[ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ]

ಕರ್ನಾಟಕ ಸರ್ಕಾರ

ಕೆ. ಆರ್. ರಸ್ತೆ, ಕೋಟೆ, ಬೆಂಗಳೂರು – 560 002.

☎: 080-2670 0810, 🖷: 080-2670 4342.

ಬೆಂವೈವಿಸಂಸಂ

ಇಮೇಲ್: director_bmcri@yahoo.co.in / director_dean@bmcri.org ಅಂತರ್ಜಾಲ: www.bmcri.org


ಸಂಖ್ಯೆ: ಬಿಎಂಸಿಆರ್‌ಐ/ಆಶಾ/73/2023-24 ದಿನಾಂಕ:21 .08.2023

## ಅಧಿಕೃತ ಜ್ಞಾಪನಾ ಪತ್ರ

ವಿಷಯ:- ಸಂಸ್ಥೆಯ "ಶುಶ್ರೂಷಾಧಿಕಾರಿ" ವೃಂದಕ್ಕೆ ಅನ್ವಯಿಸುವಂತೆ ಅಂತಿಮ ಸಿ ಅಂಡ್ ಆರ್ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂಖ್ಯೆ: ಎಂಇಡಿ 300 ಎಂಪಿಎಸ್ 2022, ದಿನಾಂಕ:19.08.2023

** * **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಶುಶ್ರೂಷಾಧಿಕಾರಿ ವೃಂದಕ್ಕೆ ಅನ್ವಯಿಸುವಂತೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಸ್ಥೆಯ ಅಂತರ್ಜಾಲದಲ್ಲಿ ಪ್ರಕಟಿಸಿ ಬಾದಿತರಿಂದ ಸ್ವೀಕೃತವಾದ ಆಕ್ಷೇಪಣೆಗಳ ಬಗ್ಗೆ ಇಲಾಖೆಯು ಸ್ಪಷ್ಟೀಕರಿಸಿದ್ದು, ಅದರಂತೆ ಅಂತಿಮಗೊಳಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳು, 2023ಕ್ಕೆ ಸಂಸ್ಥೆಯ ಆಡಳಿತ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಅನುಮೋದನೆಯನ್ನು ಪಡೆದು, ಅಂತಿಮ ವೃಂದ ಮತ್ತು ನೇಮಕಾತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವಂತೆ ಹಾಗೂ ಆಡಳಿತ ಪರಿಷತ್ತಿನ ಘಟನೋತ್ತರ ಅನುಮೋದನೆ ಪಡೆಯಲು ತಿಳಿಸಲಾಗಿರುತ್ತದೆ.

ಅದರಂತೆ, ಈ ಸಂಸ್ಥೆಯ ಶುಶ್ರೂಷಾಧಿಕಾರಿ ವೃಂದಕ್ಕೆ ಅನ್ವಯವಾಗುವಂತೆ ಅಂತಿಮಗೊಳಿಸಿರುವ ವೃಂದ ಮತ್ತು ನೇಮಕಾತಿ ನಿಯಮವನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

## ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳು.

1. **ಶೀರ್ಷಿಕೆ ಮತ್ತು ಪ್ರಾರಂಭ :-**

   (1) ಈ ನಿಯಮಗಳನ್ನು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳು, 2023 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ದಿನಾಂಕ: 19.08.2023ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ನೇಮಕಾತಿ ವಿಧಾನ, ವಯೋಮಿತಿ, ವಿದ್ಯಾರ್ಹತೆ ಹಾಗೂ ಸೇವಾನುಭವ:-**

   ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಉದ್ದೇಶಿತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹೊಂದಿಕೊಂಡ ಅನುಬಂಧ – 2 (ಬಿ) ನ ಕ್ರಮ ಸಂಖ್ಯೆ: 67ಕ್ಕೆ ಸಂಬಂಧಿಸಿದಂತೆ:-

   (ಅ) ಶುಶ್ರೂಷಾಧಿಕಾರಿ ಹುದ್ದೆಗೆ ಸಂಬಂಧಿಸಿದಂತೆ, ಶೇಕಡ 100ರಷ್ಟು ಮಂಜೂರಾದ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬುವುದು.

   (ಆ) ಸದರಿ ಹುದ್ದೆಗೆ ವಯೋಮಿತಿ ಈ ಕೆಳಕಂಡಂತೆ ನಿಗಧಿಪಡಿಸಿದೆ.

   (1) ಸಾಮಾನ್ಯ ಅಭ್ಯರ್ಥಿಗಳು - 35 ವರ್ಷಗಳು.
   (2) ಹಿಂದುಳಿದ ಜನಾಂಗದ ಅಭ್ಯರ್ಥಿಗಳು - 38 ವರ್ಷಗಳು.
   (3) ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳು - 40 ವರ್ಷಗಳು.

(ಇ) ನೇರ ನೇಮಕಾತಿಗೆ ಒಳಪಡುವ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆ ಹೊಂದಿರಬೇಕಾಗಿರುತ್ತದೆ.

(1) ಸದರಿ ಹುದ್ದೆಗೆ ಅರ್ಹತೆಯನ್ನು ನರ್ಸಿಂಗ್ (ಡಿಪ್ಲೋಮಾ) ಅಥವಾ ನರ್ಸಿಂಗ್ ಪದವಿ ಹೊಂದರಬೇಕಾಗಿರುತ್ತದೆ.

(2) ನರ್ಸಿಂಗ್ ಡಿಪ್ಲೋಮಾ ಅಭ್ಯರ್ಥಿಗಳು ಡಿಪ್ಲೋಮಾ ಪಡೆದ ನಂತರ ಕನಿಷ್ಠ 02 ವರ್ಷಗಳ ಸೇವಾನುಭವ ಹೊಂದಿರತಕ್ಕದ್ದು. ಇಂತಹ ಸೇವಾನುಭವ ಯಾವುದಾದರೂ ಕನಿಷ್ಠ 25 ಹಾಸಿಗೆ ಸಾಮರ್ಥ್ಯ ಹೊಂದಿರತಕ್ಕ ವೈದ್ಯಕೀಯ ಘಟಕದಲ್ಲಿ ಸಲ್ಲಿಸಿರುವ ಸೇವಾನುಭವವಾಗಿರಬೇಕು.

ಅಥವಾ

(3) ಬಿ.ಎಸ್ಸಿ ಅಥವಾ ತತ್ಸಮಾನ ನರ್ಸಿಂಗ್ ಪದವಿಯನ್ನು ಅಂಗೀಕೃತಗೊಂಡ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳಿಂದ ಪಡೆದಿರತಕ್ಕದ್ದು.

(ಈ) ಮಂಜೂರಾದ ಹುದ್ದೆಗಳಲ್ಲಿ ಶೇಕಡ 75 ರಷ್ಟು ಹುದ್ದೆಗಳನ್ನು ನರ್ಸಿಂಗ್ ಡಿಪ್ಲೋಮಾ ಅಭ್ಯರ್ಥಿಗಳಿಂದ ತುಂಬಲಾಗುವುದು; ಇನ್ನುಳಿದ ಶೇಕಡ 25ರಷ್ಟು ಹುದ್ದೆಗಳನ್ನು ಬಿ.ಎಸ್ಸಿ ಅಥವಾ ತತ್ಸಮಾನ ನರ್ಸಿಂಗ್ ಪದವಿಯನ್ನು ಹೊಂದಿರುವ ಅಭ್ಯರ್ಥಿಗಳಿಂದ ತುಂಬಲಾಗುವುದು.

(ಉ) ಶುಶ್ರೂಷಾಧಿಕಾರಿ ಹುದ್ದೆಗೆ ಸಂಬಂಧಿಸಿದಂತೆ ಅನುಬಂಧ-2(ಬಿ)ನ ಕ್ರಮ ಸಂಖ್ಯೆ:67ರ ಎದುರಾಗಿ ಸೂಚಿಸಿರುವ ವೇತನ ಶ್ರೇಣಿ ರೂ.33,450-62,600/- ನಿಗಧಿಪಡಿಸಿದೆ.

ನಿರ್ದೇಶಕರು ಹಾಗೂ ಡೀನ್,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
21/8/23

ಇವರಿಗೆ,
ಸಂಬಂಧಪಟ್ಟವರಿಗೆ.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿಆರ್ಐ ಹಳೆ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಪ್ರಾದೇಶಿಕ ನೇತ್ರ ಚಿಕಿತ್ಸಾ ಸಂಸ್ಥೆ, ಮಿಂಟೋ ಕಣ್ಣಾಸ್ಪತ್ರೆ, ಬೆಂವೈವಿಸಂಸಂ, ಬೆಂಗಳೂರು.
4. ಪ್ರಾಂಶುಪಾಲರು, ಬೆಂವೈವಿಸಂಸಂ, ಬೆಂಗಳೂರು.
5. ವೈದ್ಯಕೀಯ ಅಧೀಕ್ಷಕರು, ವಿಕ್ಟೋರಿಯಾ, ವಾಣಿ ವಿಲಾಸ ಮತ್ತು ಮಿಂಟೋ ಕಣ್ಣಾಸ್ಪತ್ರೆ, ಬೆಂವೈವಿಸಂಸಂ, ಬೆಂಗಳೂರು.
6. ವಿಶೇಷಾಧಿಕಾರಿ, ಸೂಪರ್ ಸ್ಪೆಷಾಲಿಟಿ ಮತ್ತು ಟ್ರಾಮಾ ಕೇರ್ ಕೇಂದ್ರ, ಬೆಂವೈವಿಸಂಸಂ, ಬೆಂಗಳೂರು.
7. ಮುಖ್ಯ ಆಡಳಿತಾಧಿಕಾರಿಗಳು, ಬೆಂವೈವಿಸಂಸಂ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಬೆಂವೈವಿಸಂಸಂ, ಬೆಂಗಳೂರು.
9. ಕಛೇರಿ ಪ್ರತಿ.